**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪೊನ್ನಂಪೇಟೆ.**

ಸಿ.ಸಿ. ನಂ. **1467/2023** ಫ್ರಾ.ಸಾ – **2**
ಚಾ.ಸಾ – **2**

ದಿನಾಂಕಃ **01.07.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು | : | ಬಾಳಪ್ಪ ನಾಯಕ್ |
| ತಂದೆಯ ಹೆಸರು | : | ಶಿವಪ್ಪ ನಾಯಕ್ |
| ವಯಸ್ಸು | : | 29 ವರ್ಷ |
| ಉದ್ಯೋಗ | : | ಪೊಲೀಸ್ ಪೇದೆ |
| ವಾಸ ಸ್ಥಳ | : | ಪೊನ್ನಂಪೇಟೆ |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ನಾನು ಕಳೆದ 2 ವರ್ಷದಿಂದ ಇಲ್ಲಿಯವರೆಗೆ ಪೊನ್ನಂಪೇಟೆ ಪೊ. ಠಾಣೆಯಲ್ಲಿ ಪೊಲೀಸ್ ಪೇದೆ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿ. 02.10.2023 ರಂದು ಚಾಸಾ 1 ರವರಿಗೆ ಬಾತ್ಮಿದಾರರು ಆರೋಪಿಯು ಅವರ ಹಳ್ಳಿಗಟ್ಟು ಗ್ರಾಮದ ಊರಿನಲ್ಲಿ ಪರವಾನಗಿ ಇಲ್ಲದೆ ಮಧ್ಯ ಮಾರಾಟ ಮಾಡುತ್ತಿರುವುದಾಗಿ ಮಾಹಿತಿ ಬಂತು. ಚಾಸಾ 1 ರವರು ಈ ವಿಚಾರವನ್ನು ನಮ್ಮ ತನಿಖಾಧಿಕಾರಿ ಚಾಸಾ 12 ರವರಿಗೆ ಲಿಖಿತ ದೂರನ್ನು ಕೊಟ್ಟಿರುತ್ತಾರೆ. ಪ್ರ.ವ. ವರದಿ ದಾಖಲಿಸಿದ ನಂತರ ಚಾಸಾ 12 ರವರು ಪಂಚರಾದ ಚಾಸಾ 4 ಮತ್ತ 5 ರವರನ್ನು ಬರಮಾಡಿಕೊಂಡು ಅವರ ಒಪ್ಪಿದ್ದು ಕೃತ್ಯ ನಡೆದ ಸ್ಥಳಕ್ಕೆ 03.50 ಕ್ಕೆ ತನಿಖಾದಿಕಾರಿ ಮತ್ತು ಸಿಬ್ಬಂದಿಗಳು ಹೋದೆವು. ಇಲಾಖಾ ವಾಹನವನ್ನು ಚಲಾಯಿಸಿಕೊಂಡು ದೂರದಲ್ಲಿ ನಿಲ್ಲಿಸಿ ಮನೆಗೆ ಹೋದಾಗ ಇಬ್ಬರು ಗ್ರಾಹಕರಿಗೆ ಆರೋಪಿ ಮಧ್ಯವನ್ನು ಮಾರಾಟ ಮಾಡುತ್ತಿದ್ದರು. ನಮ್ಮನ್ನು ನೋಡಿ ಗ್ರಾಹಕರು ಓಡಿ ಹೋದರು. ಆರೋಪಿ ಸರಿಯಾದ ಮಾಹಿತಿ ನೀಡುವುದಿಲ್ಲ. ಆರೋಪಿ ಮನೆಯನ್ನು ಶೋದಿಸಲು ಆಕೆಯು ಒಪ್ಪಿದ್ದು

ಶೋಧನಾ ವಾರೆಂಟ್ ಅನ್ನು ನ್ಯಾಯಾಲಯದಿಂದ ತರಲು ಕಾಲವಕಾಶ ಇಲ್ಲದಿರುವುದರಿಂದ ಸ್ವತಃ ತನಿಖಾದಿಕಾರಿ ಸ್ಥಳದಲ್ಲಿ ತಯಾರಿಸಿಕೊಂಡು ಮನೆಯನ್ನು ಶೋದಿಸಿದೆವು. ಆರೋಪಿಯ ಮನೆಯ ಒಂದು ಕೋಣೆಯಲ್ಲಿ ಮಂಚದ ಕೆಳಗಡೆ 2 ರೆಟ್ಟಿನ ಬಾಕ್ಸ್ ಗಳು ಇದ್ದವು. ಆರೋಪಿಯು 90 M.L. Original choice deluxe brandy, 103 tetra packet ಗಳು, 90 M.L. Original choice deluxe whiskey 22 tetra packets ಇದ್ದವು. ಅವರ ಹತ್ತಿರ ಪರವಾನಗಿ ಇರಲಿಲ್ಲ. ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಉದ್ದೇಶದಿಂದ ಶೇಖರಿಸಿರುವ ಬಗ್ಗೆ ಆರೋಪಿ ಹೇಳಿದರು. ನಂತರ ಮಾರಾಟ ಮಾಡಿ ಬಂದ ಹಣ ರೂ. 250/- ಮಂಚದ ಕೆಳಗಿನಿಂದ ಹಾಜರುಪಡಿಸಿದರು. ನಂತರ ಮಹಜರ್ ಮೂಲಕ ಇವುಗಳನ್ನು ವಶಪಡಿಸಿಕೊಂಡೆವು. ಸ್ಥಳದಲ್ಲಿ ಮಹಜರ್ ಕ್ರಮ ಜರುಗಿಸಿದಾಗ ನಾನು ಸಹಿ ಹಾಕಿರುತ್ತೇನೆ

ಸಾಕ್ಷಿಯು ಮಹಜರ್‌ನಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು ನಿ ಪಿ. 2(ಬಿ) ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ. ಸಿ. ಪಿ ವಕೀಲರಿಂದಃ

ಪೊನ್ನಂಪೇಟೆಯಿಂದ ಆರೋಪಿ ಮನೆ 1 ಕಿ. ಮೀ ದೂರ. 5 ನಿಮಿಷಕ್ಕೆ ಹೋದೆವು. ನಿ. ಪಿ. 2 ಮಹಜರ್ ನಲ್ಲಿ ನಮೂದಿಸಿರುವ VOSP ಎಂದು ನಮೂದಿಸಿದ್ದು ನ್ಯಾಯಾಲಯದ ಮುಂದೆ ಇರುವ ಟೆಟ್ರಾ ಪ್ಯಾಕೆಟ್ ಮೇಲೆ VSOP ಎಂದು ಇರುತ್ತದೆ ಎಂದರೆ ಸರಿ. ಆರೋಪಿಯ ಮನೆಯಲ್ಲಿ ನಾನು ಹೇಳಿದಂತೆ ಮಧ್ಯ ಸಿಕ್ಕಿರುವುದಿಲ್ಲ, ಆಕೆ ಮಾರಾಟ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ನಾನು ಹೇಳಿದ ಊರಿನಲ್ಲಿ ಮನೆ ಇಲ್ಲ ಎಂದರೆ ಸರಿಯಲ್ಲ. 2 ರೆಟ್ಟಿನ ಬಾಕ್ಸ್ ಗಳು ಮು. ಮಾ 2 ಮತ್ತು 3 ಎಂದು ಹೇಳಲು ಗುರುತು ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಖಾಲಿ ಟೆಟ್ರಾ ಪ್ಯಾಕೆಟ್ ಗಳು ಮತ್ತು 2 ರೆಟ್ಟಿನ ಬಾಕ್ಸ್ ಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿಕೊಂಡಿದ್ದೇವೆ

ಎಂದರೆ ಸರಿಯಲ್ಲ. ಆರೋಪಿಗೂ, ಈ ಮು. ಮಾ ಗಳಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ನಿ. ಪಿ. 2 ಕ್ಕೆ ಠಾಣೆಯಲ್ಲಿ ಬರೆದುಕೊಂಡು ಅಲ್ಲೇ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಅಂಕಿ ಅಂಶಗಳಿಗೋಸ್ಕರ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಆದ್ದರಿಂದ ಮಹಜರ್‌ನಲ್ಲಿರುವ ಬ್ರಾಂಡ್‌ನ ಮತ್ತು ನ್ಯಾಯಾಲಯದಲ್ಲಿರುವ ಟೆಟ್ರಾ ಪ್ಯಾಕೆಟ್ ಬ್ರಾಂಡ್‌ಗೆ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ಆರೋಪಿಯಿಂದ ಮನೆಯಿಂದ ಯಾವುದೇ ಹಣವನ್ನು ಅಮಾನತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

Sd/xxx-
ಸಿವಿಲ್ ನ್ಯಾಯಾಧೀಶರು, ಪೊನ್ನಂಪೇಟೆ.